# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ. **1360/*2022*** ಡಿ.ಡಬ್ಲೂ .1

ದಿನಾಂಕಃ 21-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದಃ-

ಯಶೋದಮ್ಮನವರು ಗೊತ್ತು. ಅವರು ನಮ್ಮ ತಾಯಿ. ಅವರು ನನ್ನೊಂದಿಗೆ ವಾಸ ಇದ್ದಾರೆ ಎಂದರೆ ಸರಿ. ನಾನು ಮತ್ತು ಯಶೋದಮ್ಮ ಮಾಲೂರು ನಗರದಲ್ಲಿ ಸುಮಾರು 30 ವರ್ಷಗಳಿಂದ ವಾಸ ಇದ್ದೇವೆ ಎಂದರೆ ಸರಿಯಲ್ಲ. ಸುಮಾರು 25 ವರ್ಷಗಳಿಂದ ವಾಸ ಇದ್ದೇವೆ. ಸದರಿ ಯಶೋದಮ್ಮನವರು ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ಸದರಿ ಯಶೋದಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹೌದು.

ದಾವಾ ಆಸ್ತಿಗಳು ಮೂಲತಃ ನನ್ನ ತಾತ ಹುಚ್ಚಪ್ಪನವರಿಗೆ ಸೇರಿತ್ತು. ಸದರಿಹುಚ್ಚಪ್ಪನವರಿಗೆ ಕೆಂಪಣ್ಣ. ಚೆನ್ನರಾಯಪ್ಪ ಮತ್ತು ನಂಜಪ್ಪ ಎಂಬ 3 ಜನ ಮಕ್ಕಳು ಎಂದರೆ ಹೌದು. ಕೆಂಪಣ್ಣನವರಿಗೆ ಮಕ್ಕಳು ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹೌದು. ಚೆನ್ನರಾಯಪ್ಪನವರಿಗೆ ಶಾಂತಮ್ಮ, ರತ್ನಮ್ಮ ಮತ್ತು ಲಕ್ಷ್ಮಮ್ಮ ಎಂಬ 3 ಜನ ಮಕ್ಕಳು ಎಂದರೆ ಸಾಕ್ಷಿ ರತ್ನಮ್ಮ ರವರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ರತ್ನಮ್ಮ ಮರಣ ಹೊಂದಿರುವ ಕಾರಣ ಚೆನ್ನರಾಯಪ್ಪನವರಿಗೆ ಇಬ್ಬರು ಮಕ್ಕಳು ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಶಾಂತಮ್ಮನವರಿಗೆ ಯಶೋದಮ್ಮ ಎಂಬ ಒಬ್ಬರೆ ಮಗಳು ಎಂದರೆ ಹೌದು. ಲಕ್ಷ್ಮಮ್ಮ ಎಂಬುವವರು ಜೀವಂತ ಇದ್ದಾರೆ ಎಂದರೆ ಹೌದು. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಚೆನ್ನರಾಯಪ್ಪನವರು ಜೀವಂತ ಇದ್ದಾಗ ಅವರಿಗೆ ಗಂಡು ಸಂತತಿ ಇಲ್ಲದ ಕಾರಣ ಅವರ ಅಣ್ಣ ಮತ್ತು ತಮ್ಮನಾದ ಕೆಂಪಣ್ಣ ಮತ್ತು ನಂಜಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ಸದರಿ ಚೆನ್ನರಾಯಪ್ಪನ 1 ನೇ ಮಗಳಾದ ಶಾಂತಮ್ಮನವರ ಮಗಳು ನನ್ನ ತಾಯಿ ಯಶೋದಮ್ಮ ಎಂದರೆ ಹೌದು. ಯಶೋದಮ್ಮನವರಾಗಲಿಲ, ಅವರ ತಾಯಿ ಶಾಂತಮ್ಮನವರಾಗಲಿ ಮತ್ತು ಲಕ್ಷ್ಮಮ್ಮನವರಾಗಲೀ ದಾವಾ ಆಸ್ತಿಗಳಲ್ಲಿ ಭಾಗ ಬೇಕು ಎಂದು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಒಂದು ಕೇಸು ಹಾಕಿದ್ದರು. ಸದರಿ ಕೇಸಿನ ದಾಖಲೆಗಳನ್ನು ಹಾಜರು ಮಾಡಿಲ್ಲ. ಸದರಿ ಕೇಸನ್ನು ನಂಜಪ್ಪ ಮತ್ತು ಕೆಂಪಣ್ಣನವರ ಮೇಲೆ ಹಾಕಿದ್ದರು. ಸದರಿ ದಾವೆ ಏನಾಗಿರುತ್ತದೆ ಎಂದು ಗೊತ್ತಿಲ್ಲ. ಆ ರೀತಿ ಅವರು ಯಾವುದೇ ಕೇಸು ಹಾಕಿಲ್ಲದೆ ಇದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚೆನ್ನರಾಯಪ್ಪ ತನ್ನ ಭಾಗದ ಆಸ್ತಿಗಳನ್ನು ಮಾರಾಟ ಮಾಡಿದ ನಂತರ ನಂಜಪ್ಪ ಮತ್ತು ಕೆಂಪಣ್ಣ ಸದರಿ ಆಸ್ತಿಗಳ ಜಂಟಿಯಾಗಿ ಖಾತೆ ಮುಂದುವರೆಸಿಕೊಂಡಿರತ್ತಾರೆ ಎಂದರೆ ಹೌದು. ನಂತರ ದಿನಾಂಕಃ 01-01-1998 ರಂದು ಅವರುಗಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಹೌದು. ಹುಚ್ಚಪ್ಪನವರ ಮಗ ಕೆಂಪಣ್ಣ ಮರಣ ಹೊಂದಿರುತ್ತಾರೆ ಎಂದರೆ ಹೌದು.ಅವರಿಗೆ ಮ್ಕಕಳಿದ್ದಾರೆ ಎಂದರೆ ಸರಿ. ಅವರ ಭಾಗಕ್ಕೆ ಹೋದ ಆಸ್ತಿಗಳು ಮತ್ತು ಕೆಂಪಣ್ಣನ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಕೆವಲ ನಂಜಪ್ಪನ ಭಾಗಕ್ಕೆ ಬಂದ ಆಸ್ತಿಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಹೌದು.

1 ನೇ ಪ್ರತಿವಾದಿಯ ತಂದೆ ನಂಜಪ್ಪನವರನ್ನು ನಾನು ನೋಡಿಲ್ಲ. ಅವರು ಮರಣ ಹೊಂದಿ ಈಗೆ 8 ವರ್ಷಗಳಾಗಿರುತ್ತದೆ. ಅವರ ಮರಣದ ದಿನಾಂಕ ಗೊತ್ತಿಲ್ಲ. ನಾನು ಸದರಿ ನಂಜಪ್ಪನವರ ಮೊಮ್ಮಗ ಎಂದು ನನ್ನ ತಂದೆ-ತಾಯಿ ನನಗೆ ಹೇಳಿರುತ್ತಾರೆ. ನಾನು ನಂಜಪ್ಪನವರ ಮೊಮ್ಮಗನಲ್ಲ, ಚೆನ್ನರಾಯಪ್ಪನವರ ಮಗಳಾದ ಶಾಂತಮ್ಮನವರ ಮೊಮ್ಮಗ ಎಂದರೆ ಹೌದು. ನಾನು ನಂಜಪ್ಪನವರ ಮೊಮ್ಮಗ ಎಂದು ತೋರಿಸಲು ವಂಶ ವೃಕ್ಷ ಹಾಜರು ಮಾಡಿರುತ್ತೆನೆ. ನಿಪಿ. 2 ನ್ನು ಯಾವುದೇ ಸಂಬಂಧಪಟ್ಟ ಇಲಾಖೆಯಿಂದ ಪಡೆದಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಬರೆಸಿ ಹಾಜರು ಮಾಡಿರುತ್ತೇನೆ ಎಂದರೆ ಸುಳ್ಳು. ನಿಪಿ. 2 ನ್ನು ತಾಯಾರಿಸಿರು ದಿನಾಂಕಃ 30-10-2017 ರಂದು ನಾನು ದೊಡ್ಡಅರಳಗೇರೆ ಗ್ರಾಮದಲ್ಲಿ ವಾಸವಾಗಿದ್ದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ನಾನು ಈದುವರೆಗೂ ದೊಡ್ಡಅರಳಗೇರೆ ಗ್ರಾಮದಲ್ಲಿ ವಾಸವಾಗಿರುವುದಿಲ್ಲ, ನನ್ನ ತಾಯಿ ಮೊದಲು ವಾಸವಾಗಿದ್ದರು. ಅವರು ಯಾವ ಸಾಲಿನಲ್ಲಿ ವಾಸವಾಗಿದ್ದರು ಎಂದರೆ ನೆನಪಿಲ್ಲ. ಅವರು ದೊಡ್ಡಅರಳಗೇರೆ ಗ್ರಾಮದಲ್ಲಿ ವಾಸವಾಗಿದ್ದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ.

1 ನೇ ಪ್ರತಿವಾದಿಗೆ ಪ್ರಭಾಮ್ಮ ಎಂಬ ಹೆಂಡತಿ ಇದ್ದಾರೆ ಎಂದರೆ ಸಾಕ್ಷಿ ಅವರು ಪ್ರತಿವಾದಿಯ 2 ನೇ ಹೆಂಡತಿ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ಸದರಿ ಪ್ರಭಮ್ಮನವರ ಮಕ್ಕಳು ಎಂದರೆ ಸರಿ. ನನ್ನ ತಾಯಿಯ ಮದುವೆ ಯಾವಾಗ ಆಗಿರುತ್ತದೆ ಎಂದರೆ ನೆನಪಿಲ್ಲ. ಅವರ ಮದುವೆ ಗ್ರಾಮದ ಮನೆಯಲ್ಲಿ ಆಗಿರುತ್ತದೆ ಎಂದು ಹೇಳುತ್ತಿದ್ದರು. ನನ್ನ ತಾಯಿಯ ಮದುವೆ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಹಾಜರು ಮಾಡಲು ತೊಂದರೆ ಇಲ್ಲ. ಯಶೋಧಮ್ಮನವರು 1 ನೇ ಪ್ರತಿವಾದಿಯ ಹೆಂಡತಿ ಅಲ್ಲದೆ ಇದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ

ವಿಚಾರಗಳು ಗೊತ್ತಾಗುತ್ತದೆ ಎಂಬ ಕಾರಣದಿಂದ ನನ್ನ ತಾಯಿ ಯಶೋಧಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸುಳ್ಳು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.